**<u>ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *29.07.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ</u>**

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಂ.ಎಸ್. ರವರಿಂದಃ</u>**

ನಾನು ಶಿವು ಅವರ ಮುಖಾಂತರ ದೂರನ್ನು ಬರೆಸಿ ಕೊಟ್ಟಾಗ ಬೆಳಗ್ಗೆ 11.00 ಗಂಟೆ ಆಗಿತ್ತು. ನನ್ನ ಮದುವೆ ಆದ ಮೇಲೆ ನಾನು ನನ್ನ ಗಂಡ ಬಸವರಾಜು ಅವರ ಜೊತೆಯಲ್ಲಿ ಬಿಳಿಗೆರೆ ಗ್ರಾಮದಲ್ಲಿ ವಾಸವಾಗಿದ್ದೆ. ಗಲಾಟೆಯಾಗಿತ್ತು ಎಂದು ಹೇಳುವ ಸೈಟ್ ನಲ್ಲಿ ಮೊದಲು ಒಂದು ಹಳೆ ಮನೆ ಇತ್ತು ನಾವುಗಳು ಅಲ್ಲಿ ವಾಸವಾಗಿದ್ದೆವು. ನನ್ನ ಮದುವೆ ಆದ ಮೇಲೆ ನಾನು ಮತ್ತು ನನ್ನ ಗಂಡ ಆ ಹಳೆಯ ಮನೆಯಲ್ಲಿ ನನ್ನ ಭಾವ ಸಿದ್ದರಾಜು, ಅವರ ಹೆಂಡತಿ ಸುಧಾ, ಮೈದುನ ಇದ್ದ ಅವರು ಮರಣ ಹೊಂದಿರುತ್ತಾರೆ, ನಾದಿನಿ ಸಹ ಇದ್ದು ಅವರ ಮದುವೆ ಆಗಿರುತ್ತದೆ. ನಾವು ವಾಸವಿದ್ದೆವು ಎಂದು ಹೇಳುವ ಮನೆ ಮಂಗಳೂರು ಹೆಂಚಿನ ಮನೆ ಎಂದರೆ ಸರಿ. ನಾನು ನನ್ನ ಗಂಡ ಮತ್ತು ಮೇಲೆ ಹೇಳಿದ ಎಲ್ಲರೂ ಸುಮಾರು 10 ವರ್ಷಗಳ ವರೆಗೆ ಒಟ್ಟಿಗೆ ಇದ್ದೆವು. ಸಿದ್ದರಾಜು ಮತ್ತು ಅವರ ಹೆಂಡತಿ ಸುಧಾ ಆ ನಂತರ ಬೇರೆ ಮನೆಗೆ ಹೋಗಿದ್ದರು. ನಾನು, ನನ್ನ ಗಂಡ, ಮೈದುನ ದ್ವಾರಕೀಶ್ ಮತ್ತು ನಾದಿನಿ ಒಟ್ಟಿಗೆ ವಾಸವಾಗಿದ್ದೆವು. ಸಿದ್ದರಾಜು ಮತ್ತು ಸುಧಾ ಮನೆಯಿಂದ ಹೊರಗೆ ಹೋದ ಮೇಲೆ ಹಳೇ ಊರಿನಲ್ಲಿ ಒಂದು ಶೆಡ್ ನಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಅದು ಹಳೆ ಮನೆ ಇತ್ತು.

ನಾವು ವಾಸವಾಗಿದ್ದ ಮನೆಯಿಂದ ಸಿದ್ದರಾಜು ಮತ್ತು ಸುಧಾ ವಾಸವಿದ್ದ ಮನೆಗೆ ಎಷ್ಟು ಅಂತರ ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಹಳೆಯ ಊರು ಮತ್ತು ನಾವು ವಾಸವಾಗಿದ್ದ ಮನೆಯ ಮಧ್ಯದಲ್ಲಿ ರಸ್ತೆ ಇದ್ದು ಆ ರಸ್ತೆಯ ದಕ್ಷಿಣದಲ್ಲಿ ಬರುವ ಊರಿನಲ್ಲಿ ನಾವು ವಾಸವಾಗಿದ್ದೆವು

ಎಂದರೆ ಸರಿ. ಆ ರಸ್ತೆಯಿಂದ ಉತ್ತರಕ್ಕೆ ಬರುವ ಊರಿನಲ್ಲಿ ಸಿದ್ದರಾಜು ಮತ್ತು ಸುಧಾ ವಾಸವಾಗಿದ್ದರು ಎಂದರೆ ಸರಿ. ನಾವು ವಾಸವಾಗಿದ್ದ ಮನೆಯಿಂದ ಸಿದ್ದರಾಜು ಮತ್ತು ಸುಧಾ ವಾಸವಿದ್ದ ಮನೆಗೆ ಸುಮಾರು 2 ಫರ್ಲಾಂಗ್ ಅಂತರ ಎಂದರೆ ಸರಿ. ಸಿದ್ದರಾಜು ಮತ್ತು ಸುಧಾ ಅದೇ ಮನೆಯಲ್ಲಿ ಈಗಲೂ ವಾಸವಾಗಿದ್ದಾರೆ ಎಂದರೆ ಸರಿ. ನಾವು ವಾಸವಾಗಿದ್ದ ಮನೆಯಲ್ಲಿಯೇ ನನ್ನ ಮತ್ತೊಬ್ಬ ಮೈದುನ ದ್ವಾರಕೀಷ್ ಮರಣ ಹೊಂದಿದ್ದ ಎಂದರೆ ಸರಿ. ನನ್ನ ನಾದಿನಿ ವಿಜಯಲಕ್ಷ್ಮಿ ಅದೇ ಮನೆಯಿಂದ ಮದುವೆಯಾಗಿ ಗಂಡನ ಮನೆಗೆ ಹೋಗಿದ್ದಳು ಎಂದರೆ ಸರಿ. ಸಿದ್ದರಾಜು ಮತ್ತು ಅವರ ಹೆಂಡತಿ ಸುಧಾ ಗಲಾಟೆ ಮಾಡಿಕೊಂಡು ನಾವು ವಾಸವಿದ್ದ ಮನೆಯಿಂದ ಬೇರೆ ಮನೆಗೆ ಹೋಗಿದ್ದರು. ಅವರುಗಳು ಸಣ್ಣ ಪುಟ್ಟ ವಿಷಯಕ್ಕೆ ನಾವು ಬೇರೆ ಇರುತ್ತೇವೆ ಎಂದು ಹೇಳಿ ಹೋಗಿದ್ದರು. 2 ನೇ ಆರೋಪಿ ಸುಧಾಗೂ ಮತ್ತು ನನಗೂ ಮನಸ್ತಾಪ ಉಂಟಾಗಿದ್ದರಿಂದ ಸಿದ್ದರಾಜು ಮತ್ತು ಸುಧಾ  ಅವರು ಬೇರೆ ಮನೆಗೆ ಹೋದರು ಎಂದರೆ ಸರಿ. ಸುಧಾ ಮತ್ತು ಸಿದ್ದರಾಜು ಮನೆಯಿಂದ ಹೊರಗಡೆ ಹೋದ ಮೇಲೆ ಅವರು ನಮ್ಮ ವಿಚಾರದ ಬಗ್ಗೆ ತಲೆ ಹಾಕುತ್ತಿರಲಿಲ್ಲ ಎಂದರೆ ಸರಿಯಲ್ಲ. ಅಣ್ಣ ತಮ್ಮ ಮನೆ ಹತ್ತಿರ ಮಾತನಾಡಿಕೊಂಡು ಹೋಗುತ್ತಿದ್ದರು. ಅಲ್ಲಿಯವರೆಗೂ ವಿಶ್ವಾಸ ವಾಗಿ ಇದ್ದರು ಎಂದರೆ ಸರಿ.

ನನ್ನ ಮಾವ ಮರಣ ಹೊಂದಿದ ನಂತರ ನನ್ನ ಗಂಡ ಒಬ್ಬನೇ ಸರ್ವೆ ನಂಬರ್ 86/3, 86/4 ಎ ಮತ್ತು  86/4 ಬಿ ಆಸ್ತಿಗಳ ಖಾತೆಯನ್ನು ಮಾಡಿಸಿಕೊಂಡಿದ್ದರು ಎಂದರೆ ಮೊದಲು ನನಗೆ ಗೊತ್ತಿರಲಿಲ್ಲ ಇತ್ತೀಚಿಗೆ ನನಗೆ ಗೊತ್ತಾಗಿರುತ್ತದೆ. ಸಿದ್ದರಾಜು ನನ್ನ ಗಂಡ ಒಬ್ಬನೇ ಈ ಮೇಲೆ ಹೇಳಿದ ಸರ್ವೆ ನಂಬರ್ ಗಳ ಖಾತೆ ಮಾಡಿಸಿಕೊಂಡಿದ್ದರಿಂದ ಕೇಳಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಮೈದುನ ದ್ವಾರಕೀಷ್ ನನ್ನ ಮದುವೆಯಾದ ಎಷ್ಟು ದಿವಸಕ್ಕೆ ಮರಣ

ಹೊಂದಿದ ಎಂದು ಹೇಳಲು ಆಗುವುದಿಲ್ಲ. ನನ್ನ ಗಂಡನನ್ನು ಸಿದ್ದರಾಜು ನೀನು ಒಬ್ಬನೇ ಆಸ್ತಿಗಳ ಖಾತೆ ಮಾಡಿಸಿಕೊಂಡಿದ್ದೀಯಾ ನನಗೂ ಮತ್ತು ವಿಜಯಲಕ್ಷ್ಮಿಗೂ ಸಹ ತಿಳಿಸದೇ ಮಾಡಿಸಿಕೊಂಡಿದ್ದೀಯಾ ಎಂದು ನನ್ನ ಗಂಡನನ್ನು ಕೇಳಿದಾಗ ನನ್ನ ಗಂಡ ತಂದೆ ನನಗೊಬ್ಬನಿಗೆ ಕೊಟ್ಟಿರುತ್ತಾರೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಊರಿನಲ್ಲಿ ನನ್ನ ಭಾವ ಈ ಬಗ್ಗೆ ಪಂಚಾಯಿತಿ ಸೇರಿಸಿದ್ದರು ಎಂದರೆ ಸರಿ. ಆ ಪಂಚಾಯಿತಿಯಲ್ಲಿ ನನ್ನ ಗಂಡನಿಗೆ ಸಿದ್ದರಾಜು ಮತ್ತು ವಿಜಯಲಕ್ಷ್ಮಿಗೂ ಸಹ ಆಸ್ತಿಯಲ್ಲಿ ಭಾಗ ಇದ್ದು ನೀನು ಏಕೆ ಈ ರೀತಿ ಮೋಸ ಮಾಡಿದ್ದೀಯಾ ಎಂದು ಪಂಚಾಯಿತಿಯಲ್ಲಿ ಕೇಳಿದ್ದರು ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ನನ್ನ ಗಂಡ ಭಾಗ ಕೊಡುತ್ತೇನೆ ಎಂದು ಹೇಳಿದ್ದ ಎಂದು ಹೇಳಿರುತ್ತಾರೆ. ನನ್ನ ಭಾವ ಸಿದ್ದರಾಜು ನನ್ನ ಗಂಡನನ್ನು ಪಂಚಾಯಿತಿಗೆ ಕರೆಸಿದ್ದರಿಂದ ನನ್ನ ಗಂಡ ಪಂಚಾಯಿತಿಯಲ್ಲಿ ತನಗೆ ಅವಮಾನ ವಾಗಿತ್ತು ಎಂದು ನನ್ನ ಭಾವನ ಮೇಲೆ ಸಿಟ್ಟಾಗಿದ್ದ ಎಂದರೆ ಸರಿಯಲ್ಲ. ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ಮಾವನ ಮರಣ ನಂತರ ಆಸ್ತಿಗಳ ಖಾತೆ ನನ್ನ ಗಂಡನ ಹೆಸರಿಗೆ ಬದಲಾವಣೆ ಆದ ಬಗ್ಗೆ ನನಗೆ ಮೊದಲು ಗೊತ್ತಿರಲಿಲ್ಲ ಈಗ ಗೊತ್ತಾಗಿರುತ್ತದೆ. ಪಂಚಾಯಿತಿಯಲ್ಲಿ ನನ್ನ ಗಂಡನಿಗೆ ಸಿದ್ದರಾಜು ಮತ್ತು ವಿಜಯಲಕ್ಷ್ಮಿ ಗೆ ಭಾಗ ಕೊಡುವಂತೆ ಹೇಳಿದ್ದರು ಆದ್ದರಿಂದ ನನ್ನ ಗಂಡ ಭಾಗ ಕೊಡಲು ಒಪ್ಪಿಕೊಂಡಿದ್ದ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಏಕೆಂದರೆ ಪಂಚಾಯಿತಿಗೆ ನಾನು ಹೋಗಿರುವುದಿಲ್ಲ. ಪಂಚಾಯಿತಿದಾರರು ಯಾರೇ ಹೇಳಿದರು ನಾನು ಕೊಡುವುದಿಲ್ಲ ನನಗೆ ಅವಮಾನವಾಗಿರುತ್ತದೆ ಎಂದು ಹೇಳಿ ಉಲ್ಟಾ ಹೇಳಿದರು ಎಂದರೆ ಸರಿಯಲ್ಲ. ನನ್ನ ಗಂಡ ಸಿದ್ದರಾಜು ಮತ್ತು ವಿಜಯಲಕ್ಷ್ಮಿಗೆ ಭಾಗ ಕೊಡದೇ ಇದ್ದುದರಿಂದ ಸಿದ್ದರಾಜು ಮತ್ತು ವಿಜಯಲಕ್ಷ್ಮಿ ನಂಜನಗೂಡು ನ್ಯಾಯಾಲಯದಲ್ಲಿ ಅಸಲು

ದಾವಾ ಸಂಖ್ಯೆ 509/2015 ರಲ್ಲಿ ದಾವಾ ಸಲ್ಲಿಸಿದ್ದರು ಎಂದರೆ ಸರಿಯಲ್ಲ, ಆದರೆ ದಾವೆ ಸಲ್ಲಿಸಿರುತ್ತಾರೆ. ನನ್ನ ಗಂಡನ ಮರಣ ನಂತರ ನನ್ನನ್ನು ಆ ದಾವೆಯಲ್ಲಿ ಗಂಡನ ವಾರಸುದಾರಳು ಎಂದು ಹೇಳಿ ಸೇರ್ಪಡೆ ಮಾಡಿರುತ್ತಾರೆ ಎಂದರೆ ಸರಿ. ನಾವು ವಾಸವಾಗಿರುವ ಹಳೇ ಮನೆಯನ್ನು ಸಹ ನಂಜನಗೂಡು ನ್ಯಾಯಾಲಯದಲ್ಲಿ ಸಲ್ಲಿಸಿಲರುವ ದಾವಾದಲ್ಲಿ ಸೇರಿಸಿರುತ್ತಾರೆ ಎಂದರೆ ಸರಿ. ಹಳೇ ಮನೆ ಇದ್ದಂತಹ ಜಾಗದಲ್ಲಿ ನಾವು ಈಗ ಹೊಸ ಮನೆಯನ್ನು ಕಟ್ಟಿಕೊಂಡಿರುತ್ತೇವೆ ಎಂದರೆ ಸರಿ. ಆ ಮನೆ ಆರ್.ಸಿ.ಸಿ ಮನೆ ಎಂದರೆ ಸರಿ.

ನನ್ನ ಗಂಡ ಇಟ್ಟಿಗೆ ಕೂಲಿ ಕೆಲಸ ಮಾಡುತ್ತಿದ್ದರು. ಆರ್.ಸಿ.ಸಿ ಮನೆ ಕಟ್ಟುವ ಬಗ್ಗೆ ಲಕ್ಷಾಂತರ ರೂಪಾಯಿ ಖರ್ಚಾಗಿರುತ್ತದೆ. ನಮ್ಮ ಊರಿನಲ್ಲಿ ಮಹಿಳಾ ಸಂಘಗಳು ಇರುತ್ತವೆ ಎಂದರೆ ಸರಿ. ಆ ಸಂಘಗಳಲ್ಲಿ ಮಹಿಳೆಯರಿಗೆ ವಾರದ ಕಂತು, ತಿಂಗಳ ಕಂತು, 15 ದಿನಗಳ ಕಂತುಗಳ ಸಾಲ ಕೊಡುತ್ತಾರೆ ಎಂದರೆ ಸರಿ. ನಾನು ಸಹ ಸಂಘಗಳಲ್ಲಿ ಸಾಲ ತೆಗೆದುಕೊಂಡಿದ್ದೆ ಎಂದರೆ ಸರಿಯಲ್ಲ. ಸರ್ಕಾರದಿಂದ ಹಣ ಬಂದಿತ್ತು ಮತ್ತು ನಾನು ಕೆಲಸ ಮಾಡುವವರ ಕಡೆ 4,00,000/- ರೂ ಹಣ ಪಡೆದುಕೊಂಡು ಮನೆ ಕಟ್ಟಿದ್ದೇನೆ. ನಾನು ಮನೆ ಕಟ್ಟುವ ಸಲುವಾಗಿ ಸಾಲ ಪಡೆದುಕೊಂಡಿದ್ದೆ ಎಂದರೆ ಒಂದು ಮಹಿಳಾ ಸಂಘದಲ್ಲಿ ಮಾತ್ರ ತೆಗೆದುಕೊಂಡಿದ್ದೇನೆ. ನಾನು ಬೇರೆಯವರ ಕಡೆಯೂ ಮನೆಕಟ್ಟುವ ಸಲುವಾಗಿ ಸಾಲಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ನಾನು ಮಹಿಳಾ ಸಂಘದಿಂದ ಹಣ ತೆಗೆದುಕೊಂಡಿದ್ದರಿಂದ ಮತ್ತು ಬೇರೆಯವರ ಕಡೆಯಿಂದ ಸಾಲ ಪಡೆದುಕೊಂಡಿದ್ದರಿಂದ ನನಗೆ ಬಡ್ಡಿ ಕಟ್ಟಲು ಹಣದ ಮುಗ್ಗಟ್ಟು ಉಂಟಾಗಿತ್ತು ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ನಾನು ಮತ್ತು ನನ್ನ ಗಂಡ ಮನೆಯಲ್ಲಿ ಜಗಳ ಮಾಡಿಕೊಳ್ಳುತ್ತಿದ್ದೆವು ಎಂದರೆ ಸರಿಯಲ್ಲ. ನಾವು ಸಾಲ ಮಾಡಿಕೊಂಡಿದ್ದರಿಂದ ಆ ಸಾಲವನ್ನು ತೀರಿಸುವ ಸಲುವಾಗಿ ನನ್ನ ಗಂಡನ

ಹೆಸರಿನಲ್ಲಿ ಇದ್ದಂತಹ ಜಮೀನನ್ನು ಮಾರಾಟ ಮಾಡಲು ಪ್ರಯತ್ನ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಜಮೀನನ್ನು ಮಾರಾಟ ಮಾಡಿ ಸಾಲವನ್ನು ತೀರಿಸಿಬಿಡು ಎಂದು ನಾನು ಹಿಂಸೆ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ನನ್ನ ಗಂಡನಿಗೆ ಜಮೀನನ್ನು ಮಾರಾಟ ಮಾಡಿ ಸಾಲ ತೀರಿಸಿ ಬಿಡು ಎಂದು ಹಿಂಸೆ ಕೊಡುತ್ತಿದ್ದರಿಂದ ಮತ್ತು ನನ್ನ ಗಂಡನ ಅಣ್ಣ ಮತ್ತು ತಂಗಿ ನಂಜನಗೂಡು ನ್ಯಾಯಾಲಯದಲ್ಲಿ ದಾವಾ ಹಾಕಿದ್ದರಿಂದ ನನ್ನ ಗಂಡನಿಗೆ ಜಮೀನನ್ನು ಮಾರಾಟ ಮಾಡಲು ಅವಕಾಶ ಇಲ್ಲದ ಹಾಗೆ ಆಗಿತ್ತು. ನನ್ನ ಗಂಡನ ಅಣ್ಣ ಮತ್ತು ತಂಗಿ ಕೇಸು ಹಾಕಿದ್ದರಿಂದ ಆ ಕೇಸು ನಡೆಯುತ್ತಿತ್ತು ನನ್ನ ಗಂಡನೂ ಹೋಗುತ್ತಿದ್ದ ನಾವು ಮನೆ ಕಟ್ಟಿದ ಮೇಲೆ ಕೇಸನ್ನು ಹಾಕಿರುತ್ತಾರೆ ಅದೇ ಕಾರಣಕ್ಕಾಗಿ ತೊಂದರೆ ಆಗುತ್ತಿತ್ತು. ನನ್ನ ಗಂಡನಿಗೆ ಸಾಲ ಜಾಸ್ತಿಯಾಗಿದ್ದರಿಂದ ನಾನು ನನ್ನ ಗಂಡನನ್ನು ತ್ಯಜಿಸಿ ತವರು ಮನೆಗೆ ಹೋಗಿದ್ದೆ ಎಂದರೆ ಸರಿಯಲ್ಲ. ನನ್ನ ಗಂಡ ನನಗೆ ಸಾಲವನ್ನು ಹೇಗಾದರು ಮಾಡಿ ತೀರಿಸಿಕೊಳ್ಳುತ್ತೇನೆ ನೀನು ಬಂದು ನನ್ನ ಜೊತೆಯಲ್ಲಿ ವಾಸಮಾಡು ಎಂದು ಹೇಳುತ್ತಿದ್ದ ಎಂದರೆ ಸರಿಯಲ್ಲ.

ಮೊದಲು ನನ್ನ ಮಗನನ್ನು ನಂಜನಗೂಡಿನಲ್ಲಿ ಶಾಲೆಗೆ ಸೇರಿಸಿದ್ದೆವು. ಆಗ ನನ್ನ ತಾಯಿ ಮನೆಯಿಂದ ನಂಜನಗೂಡಿನ ಶಾಲೆಗೆ ನನ್ನ ಮಗ ಹೋಗುತ್ತಿದ್ದ. ನಂಜನಗೂಡಿನಿಂದ ನನ್ನ ತಾಯಿಯ ಮನೆಗೆ ಹತ್ತಿರ ಇತ್ತು. ಕಲ್ಲಹಳ್ಳಿಯೂ ಸಹ ನಂಜನಗೂಡಿಗೆ ಸೇರ್ಪಡೆ ಆಗಿತ್ತು. ಆನಂತರ ನನ್ನ ಮಗನನ್ನು ನಮ್ಮ ಊರಿನಲ್ಲಿಯೇ ಸೇರಿಸಿದ್ದೆವು. ನನ್ನ ಗಂಡ ತೀರಿಕೊಂಡ ಮೇಲೆ ನಾನು ನನ್ನ ಮಗನನ್ನು ಬಿಳಿಗೆರೆಯಲ್ಲಿ ಸೇರಿಸಿರುತ್ತೇನೆ ಅದಕ್ಕಿಂತ ಪೂರ್ವದಲ್ಲಿ ನಂಜನಗೂಡಿನಲ್ಲಿ ಓದುತ್ತಿದ್ದ. ನಾನು ನನ್ನ ಗಂಡನನ್ನು ಬಿಟ್ಟು ನನ್ನ ತವರು ಮನೆಗೆ ಹೋಗಿದ್ದರಿಂದ ಮಹಿಳಾ ಸಂಘದವರು ನಿನ್ನ ಹೆಂಡತಿ ಹಣ ತೆಗೆದುಕೊಂಡಿರುತ್ತಾರೆ ಕಟ್ಟುತ್ತಿಲ್ಲ ನಾವೇ ಕಟ್ಟಬೇಕಾಗುತ್ತದೆ

ಎಂದು ನನ್ನ ಗಂಡನಿಗೆ ಹೇಳುತ್ತಿದ್ದರು ಮತ್ತು ನನ್ನ ಗಂಡನಿಗೆ ನೀನೆ ಕಟ್ಟು ಎಂದು ಹೇಳುತ್ತಿದ್ದರು ಎಂದರೆ ಸರಿಯಲ್ಲ. ಮಹಿಳಾ ಸಂಘದವರು ನನ್ನ ಗಂಡನಿಗೆ ಹಣ ಕಟ್ಟು ಎಂದು ಹೇಳುತ್ತಿದ್ದರಿಂದ ಮತ್ತು ನಾನು ನನ್ನ ಗಂಡನನ್ನು ಬಿಟ್ಟು ತವರು ಮನೆಗೆ ಹೋಗಿದ್ದರಿಂದ ನನ್ನ ಗಂಡನಿಗೆ ಮಾನಸಿಕ ಹಿಂಸೆ ಆಗುತ್ತಿತ್ತು ಎಂದರೆ ಸರಿಯಲ್ಲ. ನನ್ನ ಗಂಡನಿಗೆ ನೀನು ತವರು ಮನೆಗೆ ಬಂದುಬಿಡು ತವರುಮನೆಗೆ ಹತ್ತಿರದಲ್ಲಿ ಫ್ಯಾಕ್ಟರಿಗಳು ಇರುತ್ತವೆ  ನಾನು ಮತ್ತು ನೀನು ಫ್ಯಾಕ್ಟರಿ ಕೆಲಸಕ್ಕೆ ಹೋಗೋಣ ಮತ್ತು ಸಾಲವನ್ನು ತೀರಿಸಿಕೊಳ್ಳೋಣ ಎಂದು ಹೇಳುತ್ತಿದ್ದೆ ಎಂದರೆ ಸರಿಯಲ್ಲ. ಮಹಿಳಾ ಸಂಘದಲ್ಲಿ ಹಣ ಕಟ್ಟುವ ದಿವಸದ ಹಿಂದಿನ ದಿವಸವೇ ನನ್ನ ಗಂಡ ನನ್ನ ತವರು ಮನೆಗೆ ಬರುತ್ತಿದ್ದ ಆ ನಂತರ ಅವಧಿ ಮುಗಿದ ಮೇಲೆ ವಾಪಸ್ಸು ಊರಿಗೆ ಹೋಗುತ್ತಿದ್ದ ಎಂದರೆ ಸರಿಯಲ್ಲ. ನನ್ನ ಗಂಡ ಆ ರೀತಿ ಊರಿಗೆ ಹೋದ ಮೇಲೆ ಮಹಿಳಾ ಸಂಘದವರು ನನ್ನ ಗಂಡನಿಗೆ ನಿನ್ನ ಹೆಂಡತಿಯನ್ನು ಕರೆಸಿ ಎಂದು ಒತ್ತಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅದೇ  ಹಿಂಸೆಯಿಂದ ನನ್ನ ಗಂಡ ತಾನು ಜೀವಂತ ಇರಬಾರದು ಎಂದು ಹೇಳಿ ತೀರ್ಮಾನ ತೆಗೆದುಕೊಂಡಿದ್ದ ಎಂದರೆ ಸರಿಯಲ್ಲ. ನನ್ನ ಮದುವೆಯಾದಾಗಿನಿಂದ ಸಿದ್ದರಾಜು ಮತ್ತು ಅವರ ಹೆಂಡತಿ ಸುಧಾ ಹಳೇ ಊರಿನ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ, ಮೊದಲು ನಮ್ಮ ಜೊತೆಯಲ್ಲಿ ಇದ್ದು ಆ ನಂತರ ಬೇರೆ ಹೋಗಿರುತ್ತಾರೆ. ಬೇರೆ ಹೋದಾಗಿನಿಂದ ಸಿದ್ದರಾಜು ಮತ್ತು ಅವರ ಹೆಂಡತಿ ಸುಧಾ ಬೇರೆ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಆರೋಪಿ 5 ರಿಂದ 7, 2 ನೇ ಆರೋಪಿಯ ತಂದೆ ತಾಯಿ ಮತ್ತು ತಮ್ಮ ಎಂದರೆ ಸರಿ. ಅವರುಗಳು ನಂಜನಗೂಡು ತಾಲ್ಲೂಕು ಗೀಕಹಳ್ಳಿ ಗ್ರಾಮದವರು ಎಂದರೆ ಸರಿ. ಅವರುಗಳು ಗೀಕಹಳ್ಳಿಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಗೀಕಹಕಳ್ಳಿ ಗ್ರಾಮದಿಂದ ಬಿಳಿಗೆರೆ ಗ್ರಾಮಕ್ಕೆ ಸುಮಾರು 10−15 ಕಿ.ಮೀಟರ್ ಅಂತರ ಇದೆ

ಎಂದರೆ ಸರಿ. ಅವರುಗಳು ಹಬ್ಬ ಹರಿದಿನಗಳಲ್ಲಿ ಎರಡನೇ ಆರೋಪಿ ಕರೆದರೆ ಬರುತ್ತಿದ್ದರು ಎಂದರೆ ಸರಿ. ಬೇರೆ ದಿನಗಳಲ್ಲಿ ಸಹ ಬರುತ್ತಿದ್ದರು. ಆರೋಪಿ 3 ಮತ್ತು 4 ರವರು ಅವರ ತಾಯಿಯ ತವರೂರಾದ ಗೀಕಹಳ್ಳಿಯಲ್ಲಿ ಅವರ ತಾತ ಮತ್ತು ಅಜ್ಜಿಯ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಬಿಳಿಗೆರೆ ಯಿಂದ ಗೀಕಹಳ್ಳಿಗೆ ಹೋಗಿ ಬಂದು ಮಾಡುತ್ತಾರೆ. ಆರೋಪಿ 3 ಮತ್ತು 4 ರವರು ಖಾಯಂ ಆಗಿ ಅವರ ಅಜ್ಜಿ ಮತ್ತು ತಾತನ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಮನೆಯ ವಿಚಾರದಲ್ಲಿ ಆರೋಪಿತರ್ಯಾರು ನನ್ನ ಗಂಡನಿಗೆ ಹಿಂಸೆ ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ.

***(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ವನ್ನು ಕೋರಿದ್ದು, ಕಾಲವಕಾಶವನ್ನು ನೀಡಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.)***

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು